KATK010047762023

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**
**ಸತ್ರ ಮೊಕದ್ದಮೆ.106/2023**

ಪ್ರಾ.ಸಾ. 10

ದೋ.ಸಾ.**16**

ದಿ.**24.06.2026**

ಹೆಸರು : ಹೆಚ್.ಬಿ.ಶಿವಣ್ಣ

ತಂದೆಯ ಹೆಸರು : ಲೇಟ್ ಹೆಚ್.ಎಸ್.ಬಸವರಾಜಯ್ಯ

ವಯಸ್ಸು : **61** ವರ್ಷ

ಉದ್ಯೋಗ : ನಿವೃತ್ತ ಪಿಎಸ್ಐ

ವಾಸಸ್ಥಳ : ಗುಬ್ಬಿ

ಸಾಕ್ಷಿಯನ್ನು ಕರೆಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

1. ಸೆಪ್ಟೆಂಬರ್ 2019 ರಿಂದ ನವೆಂಬರ್ 2023 ರವರೆಗೆ ನಾನು ಗುಬ್ಬಿ ಪೋಲೀಸ್ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿ.18.07.2022 ರಂದು ಪಿಎಸ್ಐ ಮುತ್ತುರಾಜ್ ರವರು ಈ ಪ್ರಕರಣದಲ್ಲಿ ಮೃತೆ ಮಾಲಾರವರ ಮೃತದೇಹದ ತನಿಖೆ ಮಾಡಲು ಮೌಖಿಕ ಆದೇಶ ನೀಡಿದ ಮೇರೆಗೆ ಮಹಿಳಾ ಮುಖ್ಯ ಪೇದೆ 299 ಗೀತಾ ಎಲ್. ಎಂಬುವವರೊಂದಿಗೆ ಕೃತ್ಯ ನಡೆದ ಸ್ಥಳ ವಾದ ಗುಬ್ಬಿ ಟೌನ್ ಬಾಬು ಜಗಜೀವನ್ ರಾಮ್ ನಗರದ ಮೃತೆ ವಾಸವಾಗಿದ್ದ ಗುಡಿಸಲಿಗೆ ಹೋಗಿ ಮೃತೆ ಮಾಲಾಳ ಮೃತದೇಹವನ್ನು ನೋಡಿದ್ದು, ಮೃತದೇಹದ ತನಿಖಾ ಕಾಲದಲ್ಲಿ ಪಂಚರಾಗಿ ಹಾಜರು ಇರಲು ಮಂಜುನಾಥ, ಕೀರ್ತಿ ಮತ್ತು ಚಂದ್ರ ಶೇಖರವರನ್ನು ಬರಮಾಡಿಕೊಂಡು ಅವರಿಗೆ ನೋಟೀಸ್ ಜಾರಿ ಮಾಡಿರುತ್ತೇನೆ. ಅದನ್ನು ನಿಶಾನೆ ಪಿ**1**ಎಂದು ಗುರುತಿಸಲಾಗಿದೆ. ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ**1**(ಬಿ)ಎಂದು ಗುರುತಿಸಲಾಯಿತು. ಬೆಳಿಗ್ಗೆ **10.00-12.30** ಗಂಟೆಯವರೆಗೆ ಮೃತದೇಹದ ತನಿಖಾ ಪಂಚನಾಮೆಯನ್ನು ಮಾಡಿರುತ್ತೇನೆ. ಪಂಚನಾಮೆಗೆ ನಾನು ಸಹಿ ಮಾಡಿದ್ದು, ನನ್ನ ಸಹಿಯನ್ನು ನಿಶಾನೆ ಪಿ**2**(ಬಿ) ಎಂದು ಗುರುತಿಸಲಾಯಿತು.

ಮೃತದೇಹದ ತನಿಖಾ ಕಾಲದಲ್ಲಿ ಮೃತಳ ಅಕ್ಕ ರಾಮಕ್ಕ ಮತ್ತು ಇತರೆ ಸಾಕ್ಷಿದಾರರಾದ ನರಸಿಂಹಮೂರ್ತಿ ರವರ ಹೇಳಿಕೆಯನ್ನು ಮಾಡಿಕೊಂಡಿದ್ದೇನೆ. ಆ ಸಮಯದಲ್ಲಿ ಸ್ಥಳ ದಲ್ಲಿದ್ದ ನೇಣು ಹಾಕಿಕೊಂಡಿದ್ದ ಸೀರೆ ಮತ್ತು ತಲೆಯ ಬಳಿ ಇದ್ದ ಡೆತ್ ನೋಟ್ ಬರೆದಿದ್ದಂತಹ ನೋಟ್ ಬುಕ್ ಅನ್ನು ಅಮಾನತ್ತುಪಡಿಸಿಕೊಂಡು, ಪ್ಯಾಕ್ ಮಾಡಿ, ಎಂ ಎಂಬ ಅಕ್ಷರದಿಂದ ಸೀಲ್ ಮಾಡಿರುತ್ತೇನೆ. ಮೃತದೇಹದ ತನಿಖೆ ಪಂಚಾಮೆ ಮುಗಿದ ನಂತರ ಮೃತದೇಹವನ್ನು ಮಹಿಳಾ ಮುಖ್ಯ ಪೇದೆಯ ಜೊತೆಗೆ ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಿದೆ. ನಂತರ ಠಾಣೆಗೆ ಬಂದು ಅಮಾನತ್ತುಪಡಿಸಿಕೊಂಡ ಸೀರೆ ಮತ್ತು ನೋಟ್ ಬುಕ್ ಅನ್ನು ಮಾಲುಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು. ಆ ಸಮಯದಲ್ಲಿ ಫೋಟೋ ತೆಗೆದಿದ್ದೇನೆ. ಅದನ್ನು ಪಂಚನಾಮೆಯಲ್ಲಿ ಅಳವಡಿಸಲಾಯಿತು. ಆ ದಿನ ಅಮಾನತ್ತುಪಡಿಸಿಕೊಂಡ ಸೀರೆಯನ್ನು ಈಗ ನೋಡುತ್ತಿದ್ದು ಅದನ್ನು ಮು ಮಾ **1** ಎಂದು ಗುರುತಿಸಲಾಯಿತು. ನೋಟ್ ಬುಕ್ ಅನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ**7**ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲು ಶ್ರೀ.ಹೆಚ್.ಎನ್.ಗುರುನಂಜೇಗೌಡ, ವಕೀಲರಿಂದ ಆರೋಪಿತನ ಪರವಾಗಿ:</u>**

**3.** ನನ್ನನ್ನು ಮೃತದೇಹದ ತನಿಖಾ ಪಂಚನಾಮೆ ಮಾಡಲು ನೇಮಕ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಮೃತೆಯ ಮನೆಗೆ ಹೋಗಿಲ್ಲ, ಅಲ್ಲಿ ಪಂಚನಾಮೆ ಮಾಡಿಲ್ಲ, ಸಾಕ್ಷಿದಾರರ ಹೇಳಿಕೆಗಳನ್ನು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಸೀರೆ ಮತ್ತು ನೋಟ್ ಬುಕ್ ಅನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು